# ಕನ್ನಡ ವಿಶ್ವವಿದ್ಯಾಲಯ,ಹಂಪಿ

ವಿದ್ಯಾರಣ್ಯ-೫೮೩ ೨೭೬

## ಜನವರಿ ೨೯, ೨೦೧೮ರ ಸೋಮವಾರದಂದು ನಡೆದ ಕಾರ್ಯಕಾರಿ ಸಮಿತಿ ೯೧ನೇ ಸಭೆಯ ನಡವಳಿಗಳು

**ಸಭೆಯಲ್ಲಿ ಉಪಸ್ಥಿತರಿದ್ದವರು:**

| | |
|---|---|
| ೦೧. ಡಾ. ಮಲ್ಲಿಕಾ. ಎಸ್. ಘಂಟಿ, ಮಾನ್ಯ ಕುಲಪತಿಗಳು, ಕ.ವಿ.ಹಂ. | : ಅಧ್ಯಕ್ಷರು |
| ೦೨. ಶ್ರೀ ಅಲ್ಲಮಪ್ರಭು ಬೆಟ್ಟದೂರು, ಕೊಪ್ಪಳ | : ಸದಸ್ಯರು |
| ೦೩. ಪ್ರೊ. ಎ.ವಿ. ನಾವಡ, ಮಂಗಳೂರು | : ಸದಸ್ಯರು |
| ೦೪. ಡಾ. ವೀರಣ್ಣ ರಾಜೂರ, ಧಾರವಾಡ | : ಸದಸ್ಯರು |
| ೦೫. ಪ್ರೊ. ಸಿದ್ಧಲಿಂಗಯ್ಯ, ಬೆಂಗಳೂರು | : ಸದಸ್ಯರು |
| ೦೬. ಡಾ. ಓ. ಓಬಯ್ಯ, ನಿವೃತ್ತ ಪ್ರಾಧ್ಯಾಪಕರು, ಬೆಂಗಳೂರು | : ಸದಸ್ಯರು |
| ೦೭. ಶ್ರೀಮತಿ ಮಹಾದೇವಿ ಗೋಕಾಕ್, ವಿಜಯಪುರ | : ಸದಸ್ಯರು |
| ೦೮. ಶ್ರೀ ಸರಜೂ ಕಾಟ್ಕರ್, ಬೆಳಗಾವಿ | : ಸದಸ್ಯರು |
| ೦೯. ಡಾ. ಎ. ಮೋಹನ ಕುಂಟಾರ್, ಡೀನ್, ಭಾಷಾ ನಿಕಾಯ, ಕ.ವಿ.ಹಂ. | : ಸದಸ್ಯರು |
| ೧೦. ಡಾ. ಮಂಜುನಾಥ ಬೇವಿನಕಟ್ಟಿ, ಡೀನ್, ಸಮಾಜವಿಜ್ಞಾನಗಳ ನಿಕಾಯ, ಕ.ವಿ.ಹಂ. | : ಸದಸ್ಯರು |
| ೧೧. ಡಾ. ಅಶೋಕಕುಮಾರ ರಂಜೇರೆ, ಡೀನ್, ಲಲಿತಕಲೆಗಳ ನಿಕಾಯ, ಕ.ವಿ.ಹಂ. | : ಸದಸ್ಯರು |
| ೧೨. ಡಾ. ಸಿ.ಮಹಾದೇವ, ಡೀನ್, ವಿಜ್ಞಾನಗಳ ನಿಕಾಯ, ಕ.ವಿ.ಹಂ. | : ಸದಸ್ಯರು |
| ೧೩. ಡಾ. ಸಿದ್ಧಗಂಗಮ್ಮ, ಹಣಕಾಸು ಅಧಿಕಾರಿಗಳು, ಕ.ವಿ.ಹಂ. | : ವಿಶೇಷ ಆಹ್ವಾನಿತರು |
| ೧೪. ಡಾ. ಡಿ. ಪಾಂಡುರಂಗಬಾಬು, ಕುಲಸಚಿವರು, ಕ.ವಿ.ಹಂ. | : ಪದನಿಮಿತ್ತ ಕಾರ್ಯದರ್ಶಿ |

**ಸಭೆಯಲ್ಲಿ ಅನುಪಸ್ಥಿತರಿದ್ದವರು:**

| | |
|---|---|
| ೦೧. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| ೦೨. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಹಣಕಾಸು ಇಲಾಖೆ, ಬೆಂಗಳೂರು | : ಸದಸ್ಯರು |
| ೦೩. ಸರ್ಕಾರದ ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | : ಸದಸ್ಯರು |
| ೦೪. ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | : ಸದಸ್ಯರು |
| ೦೫. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಬೆಂಗಳೂರು | : ಸದಸ್ಯರು |

ಸಭೆಯ ಆರಂಭದಲ್ಲಿ ಕುಲಸಚಿವರು ಕಾರ್ಯಕಾರಿ ಸಮಿತಿ ಸದಸ್ಯರನ್ನು ಸಭೆಗೆ ಸ್ವಾಗತಿಸಿದರು. ನಂತರ ಮಂಡಿಸಲಾದ ಕಾರ್ಯಸೂಚಿಯನ್ನು ಕುರಿತು ಚರ್ಚಿಸಿ ಈ ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು.

ನುಡಿಹಬ್ಬದ ಭಾಷಣ ಕಾರರು ಮತ್ತು ನಾಡೋಜ ಆಯ್ಕೆ ಸಮಿತಿ ಸದಸ್ಯರನ್ನು ಮಾನ್ಯ ರಾಜ್ಯಪಾಲರು ಆಯ್ಕೆಮಾಡಿ ಆದೇಶಿಸಿರುವುದನ್ನು ಮಾನ್ಯ ಕುಲಪತಿಗಳು ಸಭೆಯ ಅವಗಾಹನೆಗೆ ಮಂಡಿಸಿದರು.

ಬೆಳ್ಳಿಹಬ್ಬದ ಅನುದಾನ ಬಿಡುಗಡೆ ಸಂಬಂಧಿಸಿ ಎಲ್ಲಾ ಸದಸ್ಯರ ನಿಯೋಗ ಸರ್ಕಾರವನ್ನು ಬೇಟಿ ಮಾಡಲು ಸಭೆ ನಿರ್ಣಯಿಸಿತು.

**ದಿನಾಂಕ : ೨೪.೧೦.೨೦೧೭ರಂದು ನಡೆದ ಕಾರ್ಯಕಾರಿ ಸಮಿತಿಯ ೯೦ನೇ ಸಭೆಯ ನಡೆವಳಿಗಳ ಸ್ಥಿರೀಕರಣ ಹಾಗೂ ಅನುಮೋದನೆ ನೀಡುವ ಕುರಿತು. (ಅನುಬಂಧ-೦೧)**

ನಿರ್ಣಯ: ದಿನಾಂಕ : ೨೪.೧೦.೨೦೧೭ರಂದು ನಡೆದ ಕಾರ್ಯಕಾರಿ ಸಮಿತಿಯ ೯೦ನೇ ಸಭೆಯ ನಡೆವಳಿಗಳನ್ನು ಪರಿಶೀಲಿಸಿ, ಸ್ಥಿರೀಕರಣಕ್ಕೆ ಅನುಮೋದನೆ ನೀಡಿತು.

**ದಿನಾಂಕ : ೨೪.೧೦.೨೦೧೭ರಂದು ನಡೆದ ಕಾರ್ಯಕಾರಿ ಸಮಿತಿಯ ೯೦ನೇ ಸಭೆಯ ನಡೆವಳಿಗಳ ಅನುಪಾಲನಾ ವರದಿಗೆ ಅನುಮೋದನೆ ನೀಡುವ ಕುರಿತು.(ಅನುಬಂಧ-೦೨)**

ನಿರ್ಣಯ: ದಿನಾಂಕ: ೨೪.೧೦.೨೦೧೭ರಂದು ನಡೆದ ಕಾರ್ಯಕಾರಿ ಸಮಿತಿಯ ೯೦ನೇ ಸಭೆಯ ನಡೆವಳಿಗಳ ಅನುಪಾಲನಾ ವರದಿಗೆ ಅನುಮೋದನೆ ನೀಡಿತು.

೧೯೧.೦೧. **ದಿನಾಂಕ ೧೨.೧೨.೨೦೧೭ರಂದು ನಡೆದ ಚಿತ್ರಕಲಾ ವಿದ್ಯಾಲಯಗಳ ನಿರ್ವಹಣಾ ಕೇಂದ್ರದ ಸಲಹಾ ಸಮಿತಿ ಸಭೆಯ ನಡೆವಳಿಗೆ ಅನುಮೋದನೆ ಕೋರಿ.**

ನಿರ್ಣಯ: ಸದರಿ ಸಲಹಾ ಸಮಿತಿ ಸಭೆಯ ನಡೆವಳಿಗಳನ್ನು ಸಭೆಯು ಪರಿಶೀಲಿಸಿ ಸರ್ಕಾರವು ಅನುದಾನ ಬಿಡುಗಡೆ ಮಾಡದಿರುವ ಕುರಿತು ಚರ್ಚಿಸಿ, ಸಂಬಂಧಿಸಿದ ಕಾರ್ಯದರ್ಶಿಯವರಿಗೆ ಪತ್ರಬರೆಯಲು ಸೂಚಿಸಿ ನಡೆವಳಿಗಳಿಗೆ ಅನುಮೋದನೆ ನೀಡಿತು

೧೯೧.೦೨. **ದಿನಾಂಕ ೦೧.೧೨.೨೦೧೭ ರಂದು ನಡೆದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿಶೇಷ ಘಟಕದ (ಎಸ್‌ಸಿಪಿ/ ಟಿಎಸ್‌ಪಿ) ಸಲಹಾ ಸಮಿತಿ ಸಭೆಯ ನಡಾವಳಿ ಸ್ಥಿರೀಕರಣ ಕೋರಿ.**

ನಿರ್ಣಯ: ಸದರಿ ಸಲಹಾ ಸಮಿತಿ ಸಭೆಯ ನಡೆವಳಿಗಳನ್ನು ಸಭೆಯು ಪರಿಶೀಲಿಸಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳ ಆನ್‌ಲೈನ್ ಪ್ರವೇಶಾತಿ ಅಂತಿಮಗೊಂಡಿರುವುದರಿಂದ ಮಹಿಳಾ ವಿದ್ಯಾರ್ಥಿಗಳು ಹೆಚ್ಚಾಗಿ ಸೇರ್ಪಡೆಯಾಗಿರುವ ಹಿನ್ನೆಲೆಯಲ್ಲಿ ಎಸ್‌ಸಿಪಿ/ಟಿಎಸ್‌ಪಿ ಮತ್ತು ಅಭಿವೃದ್ಧಿ ಅನುದಾನದಲ್ಲಿ ಇಂತಹ ವಿದ್ಯಾರ್ಥಿಗಳಿಗೆ ಊಟ ಮತ್ತು ಉಪಹಾರದ ವ್ಯವಸ್ಥೆಯನ್ನು ಕೈಗೊಳ್ಳಲು ಸಭೆ ಸೂಚಿಸಿ ನಡೆವಳಿಗಳಿಗೆ ಅನುಮೋದನೆ ನೀಡಿತು.

೧೯೧.೦೩. **ದಿನಾಂಕ ೧೨.೧೨.೨೦೧೭ ರಂದು ನಡೆದ ಪ್ರಸಾರಾಂಗ ಸಲಹಾ ಸಮಿತಿ ಸಭೆಯ ನಡಾವಳಿಗೆ ಅನುಮೋದನೆ ಕೋರಿ.**

ನಿರ್ಣಯ: ದಿನಾಂಕ ೧೨.೧೨.೨೦೧೭ ರಂದು ನಡೆದ ಪ್ರಸಾರಾಂಗ ಸಲಹಾ ಸಮಿತಿ ಸಭೆಯ ನಡೆವಳಿಗಳನ್ನು ಪರಿಶೀಲಿಸಿ ಈ ಕೆಳಗಿನಂತೆ ಕ್ರಮವಹಿಸಲು ಸೂಚಿಸಿ ನಡೆವಳಿಗಳಿಗೆ ಸಭೆ ಅನುಮೋದನೆ ಕೋರಿ.

ಪ್ರೊ. ಎ.ವಿ. ನಾವಡ ಅವರು ಈ ಕುರಿತು ಚರ್ಚಿಸಿ ವಿಶ್ವವಿದ್ಯಾಲಯದ ಪುಸ್ತಗಳನ್ನು ಮರುಮುದ್ರಿಸುವ ಬದಲು, ಹೊಸ ಪುಸ್ತಕಗಳ ಮುದ್ರಣಕ್ಕೆ ಕ್ರಮವಹಿಸಲು ಸಲಹೆ ನೀಡಿದರು.

ಪೆರಿಯಾರ್ ವಿಚಾರದಾರೆ ಪುಸ್ತಕಗಳನ್ನು ಮರು ಮುದ್ರಿಸಲು ಮತ್ತು ವೆಂಕಟಸ್ವಾಮಿ ಪುಸ್ತಕ ಮುದ್ರಣ ಬಗ್ಗೆ ಪರಿಶೀಲಿಸಲು ಡಾ. ಸಿದ್ಧಲಿಂಗಯ್ಯ ಅವರು ಸೂಚಿಸಿದರು.

ಕಿಟೆಲ್ ಅವರ ಪುಸ್ತಕದ ಕನ್ನಡ ಅನುವಾದ ಮತ್ತು ಇಂಗ್ಲೀಷ ಪುಸ್ತಕ ಮುದ್ರಣಕ್ಕೆ ಸಂಬಂಧಿಸಿ ಪ್ರೊ.ಎ.ವಿ. ನಾವಡ ಅವರು ಕ್ರಮವಹಿಸಲು ಸಭೆ ನಿರ್ಣಯಿಸಿತು.

೧೯೧.೦೪. **ದಿನಾಂಕ ೧೧.೦೧.೨೦೧೮ ರಂದು ನಡೆದ ಬಂಜಾರ ಭಾಷಾಭಿವೃದ್ಧಿ ಸಂಶೋಧನಾ ಕೇಂದ್ರದ ಸಲಹಾ ಸಮಿತಿ ಸಭೆಯ ನಡೆವಳಿಗೆ ಅನುಮೋದನೆ ಕೋರಿ.**

ನಿರ್ಣಯ: ದಿನಾಂಕ ೧೧.೦೧.೨೦೧೮ ರಂದು ನಡೆದ ಬಂಜಾರ ಭಾಷಾಭಿವೃದ್ಧಿ ಸಂಶೋಧನಾ ಕೇಂದ್ರದ ಸಲಹಾ ಸಮಿತಿ ಸಭೆಯ ನಡೆವಳಿಗಳನ್ನು ಸಭೆಯು ಪರಿಶೀಲಿ ಕನ್ನಡ ಲಿಪಿಯಲ್ಲೇ ಈ ಯೋಜನೆಯನ್ನು ಕೈಗೊಳ್ಳಲು ಸೂಚಿಸಿ ಅನುಮೋದನೆ ನೀಡಿತು ಹಾಗೂ ಅನುದಾನ ಕೋರಿ ತಾಂಡ ಅಭಿವೃದ್ಧಿ ನಿಗಮಕ್ಕೆ ಪತ್ರ ಬರೆಯಲು ಸೂಚಿಸಿತು.

೧೯೧.೦೫. **ದಿನಾಂಕ ೧೧.೦೧.೨೦೧೮ ರಂದು ನಡೆದ ಹಣಕಾಸು ಸಲಹಾ ಸಮಿತಿ ಸಭೆಯ ನಡೆವಳಿಗೆ ಅನುಮೋದನೆ ಕೋರಿ.**

ನಿರ್ಣಯ: ದಿನಾಂಕ ೧೧.೦೧.೨೦೧೮ ರಂದು ನಡೆದ ಹಣಕಾಸು ಸಲಹಾ ಸಮಿತಿ ಸಭೆಯ ನಡೆವಳಿಗಳನ್ನು ಸಭೆಯು ಪರಿಶೀಲಿಸಿ ಮಾಸಿಕ ಖರ್ಚು ವೆಚ್ಚಗಳನ್ನು ವೆಬ್‌ಸೈಟ್ ಹಾಗೂ ಸೂಚನಾ ಫಲಕದಲ್ಲಿ ಪ್ರಕಟಿಸಲು ಸಭೆಯು ಸೂಚಿಸಿ ನಡೆವಳಿಗಳಿಗೆ ಅನುಮೋದನೆ ನೀಡಿತು.

೧೯೧.೦೬. **೨೦೧೭-೧೮ನೇ ಸಾಲಿನಲ್ಲಿ ಪಿಎಚ್.ಡಿ. ಪದವಿ ಪಡೆದ ವಿದ್ಯಾರ್ಥಿಗಳ ಪಿಎಚ್.ಡಿ ಅಧಿಸೂಚನೆಗಳಿಗೆ ಹಾಗೂ ವಿವಿಧ ಕೋರ್ಸ್‌ಗಳಲ್ಲಿ ಪದವಿ ಪಡೆದ (ಚಿತ್ರಕಲೆ, ದೂರಶಿಕ್ಷಣ, ಅಧ್ಯಯನಾಂಗ) ಪದವಿಗಳಿಗೆ ಅನುಮೋದನೆ ಕೋರಿ.**

ನಿರ್ಣಯ: ೨೦೧೭-೧೮ನೇ ಸಾಲಿನಲ್ಲಿ ಪಿಎಚ್.ಡಿ. ಪದವಿ ಪಡೆದ ವಿದ್ಯಾರ್ಥಿಗಳ ಪಿಎಚ್.ಡಿ ಅಧಿಸೂಚನೆಗಳಿಗೆ ಹಾಗೂ ವಿವಿಧ ಕೋರ್ಸ್‌ಗಳಲ್ಲಿ ಪದವಿ ಪಡೆದ (ಚಿತ್ರಕಲೆ, ದೂರಶಿಕ್ಷಣ, ಅಧ್ಯಯನಾಂಗ) ಪದವಿಗಳಿಗೆ ಅನುಮೋದನೆ ನೀಡಿತು.

ಶೋಧಗಂಗಾ ವೆಬ್‌ಸೈಟ್‌ಗೆ ಪಿಎಚ್.ಡಿ. ಪ್ರಬಂಧಗಳನ್ನು ಅಳವಡಿಸಲು ಸಭೆ ಸೂಚಿಸಿತು

೧೯೧.೦೭. **ಕನ್ನಡ ವಿಶ್ವವಿದ್ಯಾಲಯದಲ್ಲಿ ೧೫ ವರ್ಷಗಳಿಗಿಂತ ಹೆಚ್ಚು ಸೇವೆ ಸಲ್ಲಿಸಿರುವ ಬೋಧಕೇತರ ಸಿಬ್ಬಂದಿಗಳ ಪ್ರಸ್ತುತ ಹುದ್ದೆಗಳನ್ನು ಮೇಲ್ದರ್ಜೆಗೇರಿಸುವ ಅನುಶಾಸನಗಳಿಗೆ ಅನುಮೋದನೆ ಕೋರಿ.**

ನಿರ್ಣಯ: ಕನ್ನಡ ವಿಶ್ವವಿದ್ಯಾಲಯದಲ್ಲಿ ೧೫ ವರ್ಷಗಳಿಗಿಂತ ಹೆಚ್ಚು ಸೇವೆ ಸಲ್ಲಿಸಿರುವ ಬೋಧಕೇತರ ಸಿಬ್ಬಂದಿಗಳ ಪ್ರಸ್ತುತ ಹುದ್ದೆಗಳನ್ನು ಮೇಲ್ದರ್ಜೆಗೇರಿಸುವ ಅನುಶಾಸನಗಳಿಗೆ ಸಂಬಂಧಿಸಿದ ಹುದ್ದೆಗಳ ವಿದ್ಯಾರ್ಹತೆ ಪೂರೈಸಿರುವುದು ಖಚಿತವಾದ ನಂತರ ಕ್ರಮವಹಿಸಲು ಅನುಮೋದನೆ ನೀಡಿತು.

ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು

೧೯೧.೦೮. **ಶ್ರೀ ಎಸ್.ಎಸ್. ಪೂಜಾರ ಇವರು ಪ್ರಸಾರಾಂಗದ ಪುಸ್ತಕಕ್ಕೆ ಸಂಬಂಧಿಸಿದಂತೆ ನೀಡಿರುವ ಪತ್ರದ ಕುರಿತು.**

ನಿರ್ಣಯ: ಶ್ರೀ ಎಸ್.ಎಸ್. ಪೂಜಾರ ಇವರು ಪ್ರಸಾರಾಂಗದ ಪುಸ್ತಕಕ್ಕೆ ಸಂಬಂಧಿಸಿದಂತೆ ನೀಡಿರುವ ಪತ್ರವನ್ನು ಸಭೆಯು ಪರಿಶೀಲಿಸಿ ಈ ಕಳಗಿನಂತೆ ತೀರ್ಮಾನಿಸಿತು.

೧. ಇಬ್ಬರೂ ಎಲ್ಲಿಂದ ಈ ಹಾಡುಗಳನ್ನು ಸಂಗ್ರಹಿಸಿದ್ದಾರೆ ಎಂದು ಮಾಹಿತಿ ಪಡೆಯುವುದು.

೨. ಜಾನಪದ ಹಾಡು ಮತ್ತು ಸಾಹಿತ್ಯಕ್ಕೆ ಯಾರೂ ಹಕ್ಕುಗಳನ್ನು ಹೊಂದಿರುವುದಿಲ್ಲ ಎಂಬುದನ್ನು ಗಮನದಲ್ಲಿರಿಸಿಕೊಂಡು ಒಂದು ವೇಳೆ ಶ್ರೀ ಎಸ್.ಎಸ್. ಪೂಜಾರ ಇವರ ಕೃತಿಯಿಂದ ಮಾಹಿತಿಯನ್ನು ಪಡೆದಿದ್ದಲ್ಲಿ ಮುಂದಿನ ಆವೃತ್ತಿಯಲ್ಲಿ ಈ ವಿಷಯವನ್ನು ದಾಖಲಿಸಲು ಸಭೆ ಸೂಚಿಸಿತು. ಒಂದು ವೇಳೆ ಲೇಖಕರು ಈ ಕೃತಿಯಲ್ಲಿರುವ ಮಾಹಿತಿಯನ್ನು ಯಾವ ಮಾಹಿತಿದಾರರಿಂದ ಸಂಗ್ರಹಿಸಿದ್ದಾರೋ ಅದನ್ನು ಮುಂದಿನ ಆವೃತ್ತಿಯಲ್ಲಿ ಸೇರಿಸಿಕೊಳ್ಳಲು ಸಭೆ ಸೂಚಿಸಿತು.

೩. ಈ ವಿಷಯ ಕುರಿತು ಶ್ರೀ ಎಸ್.ಎಸ್. ಪೂಜಾರ ಅವರಿಗೆ ಪತ್ರ ಬರೆದು ಮಾಹಿತಿ ನೀಡಲು ಸಭೆ ಸೂಚಿಸಿತು.

೪. ಯಾವುದೇ ಪುಸ್ತಕ ಪ್ರಕಟಣೆ ಸಂಬಂಧಿಸಿದ ಆಕ್ಷೇಪಣೆಗಳಿಗೆ ಬರಹಗಾರರೇ/ ಸಂಪಾದಕರೇ ಜವಾಬ್ದಾರರಾಗಿರುತ್ತಾರೆಂದು ಸೂಚಿಸಿ ಎಲ್ಲಾ ವಿಭಾಗಗಳಿಗೆ ಸುತ್ತೋಲೆಯನ್ನು ಹೊರಡಿಸಲು ಸಭೆ ಸೂಚಿಸಿತು.

೧೯೧.೦೯. **ಕನ್ನಡ ವಿಶ್ವವಿದ್ಯಾಲಯದಲ್ಲಿ ವಸ್ತುಸಂಗ್ರಹಾಲಯವನ್ನು ಪುನರಾರಂಭಿಸುವ ಕುರಿತು ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗದ ಅಧ್ಯಾಪಕರುಗಳಾದ ಡಾ. ವಾಸುದೇವ ಬಡಿಗೇರ ಮತ್ತು ಡಾ. ಎಸ್.ವೈ. ಸೋಮಶೇಖರ್ ಇವರು ನೀಡಿರುವ ಪತ್ರ ಕುರಿತು.**

ನಿರ್ಣಯ: ಕನ್ನಡ ವಿಶ್ವವಿದ್ಯಾಲಯದಲ್ಲಿ ವಸ್ತುಸಂಗ್ರಹಾಲಯವನ್ನು ಪುನರಾರಂಭಿಸುವ ಕುರಿತು ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗದ ಅಧ್ಯಾಪಕರುಗಳಾದ ಡಾ. ವಾಸುದೇವ ಬಡಿಗೇರ ಮತ್ತು ಡಾ. ಎಸ್.ವೈ. ಸೋಮಶೇಖರ್ ಇವರು ನೀಡಿರುವ ಪತ್ರವನ್ನು ಸಭೆಯು ಪರಿಶೀಲಿಸಿ ಕೆಳಗಿನ ಸಲಹೆಗಳನ್ನು ಅಳವಡಿಸಲು ಸೂಚಿಸಿ ಸಭೆಯು ಅನುಮೋದನೆ ನೀಡಿತು.

೧. ಹೊಸ ಪ್ರಸಾರಾಂಗದ ಕಟ್ಟಡದಲ್ಲಿ ವಸ್ತುಸಂಗ್ರಹಾಲಯವನ್ನು ನಿರ್ಮಿಸುವುದು.

೨. ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗದ ಮುಖ್ಯಸ್ಥರನ್ನೇ ವಸ್ತುಸಂಗ್ರಹಾಲಯದ ನಿರ್ದೇಶಕರನ್ನಾಗಿ ನಿಯೋಜಿಸಲು ಇನ್ನುಮುಂದೆ ಕ್ರಮವಹಿಸಲು ಸಭೆ ಸೂಚಿಸಿತು.

೩. ಈ ವಸ್ತುಸಂಗ್ರಹಾಲಯಕ್ಕೆ ವಾರ್ಷಿಕ ಅನುದಾನವನ್ನು ಹಂಚಿಕೆ ಮಾಡುವುದು.

೪. ವಸ್ತುಸಂಗ್ರಹಾಲಯದಲ್ಲಿ ಆಡಿಯೋ/ವಿಡಿಯೋ ಅಳವಡಿಸುವುದು ಮತ್ತು ಆಧುನೀಕರಣ ಗೊಳಿಸುವುದು.

೫. ಕರಾಕೃ ಮತ್ತು ಜಿ.ಶಂ.ಪ. ವಸ್ತುಸಂಗ್ರಹಾಲಯವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಪಡೆದುಕೊಳ್ಳುವ ಕುರಿತು ಪತ್ರ ಬರೆಯಲು ಸಭೆ ಸೂಚಿಸಿತು.

೧೯೧.೧೦. **ಶ್ರೀ ಹೆಚ್.ಎಂ. ಸೋಮನಾಥ, ಅಧೀಕ್ಷಕರು, ಕನ್ನಡ ವಿಶ್ವವಿದ್ಯಾಲಯ ಹಂಪಿ ಇವರ ಮೇಲೆ ಕ್ರಮಕೈಗೊಳ್ಳುವ ಬಗ್ಗೆ ಸಮಕುಲಾಧಿಪತಿಗಳು ನೀಡಿರುವ ನಿರ್ದೇಶನ ಕುರಿತು.**

ನಿರ್ಣಯ: ಶ್ರೀ ಹೆಚ್.ಎಂ. ಸೋಮನಾಥ, ಅಧೀಕ್ಷಕರು, ಕನ್ನಡ ವಿಶ್ವವಿದ್ಯಾಲಯ ಹಂಪಿ ಇವರ ಮೇಲೆ ಕ್ರಮಕೈಗೊಳ್ಳುವ ಬಗ್ಗೆ ಸಮಕುಲಾಧಿಪತಿಗಳು ನೀಡಿರುವ ನಿರ್ದೇಶನ ಕುರಿತು ಸಭೆಯು ಪರಿಶೀಲಿಸಿ ಕೆಳಗಿನಂತೆ ಕ್ರಮವಹಿಸಲು ಸಭೆ ಸೂಚಿಸಿತು.

೧. ನಿವೃತ್ತ ಜಿಲ್ಲಾ ನ್ಯಾಯಾಧೀಶರ ಏಕ ಸದಸ್ಯ ಸಮಿತಿಯನ್ನು ರಚಿಸಿ ಇವರ ಶಿಫಾರಸ್ಸಿನಂತೆ ಕ್ರಮಕೈಗೊಳ್ಳುವುದು.

೨. ಕಾನೂನು ಸಲಹೆಗಾರರ ನಿರ್ದೇಶದಂತೆ ಕ್ರಮವಹಿಸುವುದು.

೧೯೧.೧೧. **೨೦೧೭-೧೮ನೇ ಸಾಲಿನ ಅಭಿವೃದ್ಧಿ ಅಧ್ಯಯನ ವಿಭಾಗದ ಪಿಎಚ್.ಡಿ. ಪ್ರವೇಶ ಪರೀಕ್ಷೆ ಕುರಿತು.**

ನಿರ್ಣಯ: ವಿವರಗಳನ್ನು ಪರಿಶೀಲಿಸಿದ ಸಮಿತಿಯು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸ್ನಾತಕೋತ್ತರ ಪದವಿ ಅಂಕಗಳನ್ನು ಪ್ರಸ್ತುತ ವರ್ಷದ ಪಿಎಚ್.ಡಿ. ಪ್ರವೇಶಕ್ಕಾಗಿ ಅರ್ಹತಾ ಮಾನದಂಡವಾಗಿ ಪರಿಗಣಿಸಿರುವುದನ್ನು ಸಭೆ ಅನುಮೋದಿಸಿತು.

೧೯೧.೧೨. **ಪ್ರಾಧ್ಯಾಪಕರಾದ ಡಾ. ಚಂದ್ರಪೂಜಾರಿ ಇವರು ಅಭಿವೃದ್ಧಿ ಅಧ್ಯಯನ ವಿಭಾಗದ ಪ್ರಗತಿ ಪರಿಶೀಲನೆ ಸಂಬಂಧಿಸಿದಂತೆ ನೀಡಿರುವ ಪತ್ರದ ಕುರಿತು.**

ನಿರ್ಣಯ: ವಿವರಗಳನ್ನು ಪರಿಶೀಲಿಸಿದ ಸಮಿತಿಯು ಸಂಬಂಧಿಸಿದ ವಿಭಾಗದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಯಾವುದೇ ನಿಕಾಯ ಹಾಗೂ ಯಾವುದೇ ವಿಭಾಗದ ಪ್ರಗತಿ ಪರಿಶೀಲನೆಗೆ ಡೀನರು ಲಭ್ಯರಿಲ್ಲದ ಸಂದರ್ಭದಲ್ಲಿ ವಿಭಾಗದ ಮುಖ್ಯಸ್ಥರ ಅಥವಾ ಹಿರಿಯ ಪ್ರಾಧ್ಯಾಪಕರ ನೇತೃತ್ವದಲ್ಲಿ ಪರಿಶೀಲನೆ ನಡೆಸಲು ಮತ್ತು ಯಾವುದೇ ಸಂದರ್ಭದಲ್ಲಿ ಕುಲಪತಿಯವರ ನಿರ್ಣಯವನ್ನು ಅಂತಿಮ ಎಂದು ಭಾವಿಸಲು ಸಭೆ ಸೂಚಿಸಿತು. ಒಂದು ದಿನಕ್ಕೆ ಎಷ್ಟು ವಿದ್ಯಾರ್ಥಿಗಳ ಕಲೋಕ್ವಿಯಂ, ಪ್ರಗತಿಪರಿಶೀಲನೆ ನಡೆಸಬೇಕೆಂದು ಅಧ್ಯಯನ ವಿಭಾಗದ ಸಮಿತಿಯಲ್ಲಿ ಚರ್ಚಿಸಿ ನಿರ್ಣಯ ಕೈಗೊಂಡು ಅದರಂತೆ ಕ್ರಮವಹಿಸಲು ಸಭೆ ಸೂಚಿಸಿತು

**೧೯೧.೧೩. ಪ್ರಾಧ್ಯಾಪಕರಾದ ಡಾ. ಚಿನ್ನಸ್ವಾಮಿ ಸೋಸಲೆ ಇವರ ವಾರ್ಷಿಕ ವೇತನ ಬಡ್ತಿ ಕೋರಿಕೆ.**

ನಿರ್ಣಯ: ಸದರಿಯವರ ಮನವಿಯನ್ನು ಸಭೆಯು ಪರಿಶೀಲಿಸಿ ಈಗಾಗಲೇ ದಂಡ ಪಾವತಿಸಿರುವ ಹಿನ್ನೆಲೆಯಲ್ಲಿ ಈ ಕುರಿತು ಪುನರ್ ಪರಿಶೀಲಿಸಿ ತಡೆ ಹಿಡಿಯಲಾದ ವಾರ್ಷಿಕ ವೇತನ ಬಡ್ತಿಯನ್ನು ಮಾರ್ಚ್ ೨೦೧೮ ರಿಂದ ಅನ್ವಯವಾಗುವಂತೆ ಮಾತ್ರ ಬಿಡುಗಡೆ ಮಾಡಲು ಸಭೆ ಸೂಚಿಸಿತು.

**೧೯೧.೧೪. ದಿನಾಂಕ ೨೮.೧೨.೨೦೧೭ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ವೈದ್ಯಕೀಯ ವೆಚ್ಚ ಮರುಪಾವತಿ ಸಮಿತಿ ಸಭೆಯ ನಡಾವಳಿಯ ಸ್ಥಿರೀಕರಣ ಕೋರಿ.**

ನಿರ್ಣಯ: ದಿನಾಂಕ ೨೮.೧೨.೨೦೧೭ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ವೈದ್ಯಕೀಯ ವೆಚ್ಚ ಮರುಪಾವತಿ ಸಮಿತಿ ಸಭೆಯ ನಡೆವಳಿಗಳನ್ನು ಸಭೆಯು ಪರಿಶೀಲಿಸಿ ೧೯೦ನೇ ಕಾರ್ಯಕಾರಿ ಸಮಿತಿಯ ಸಭೆಯ ನಿರ್ಣಯಗಳನ್ನು ಅನ್ವಯಿಸಿ ಕ್ರಮವಹಿಸಲು ಸೂಚಿಸಿ ನಡೆವಳಿಗಳಿಗೆ ಅನುಮೋದನೆ ನೀಡಿತು.

**೧೯೧.೧೫. ವಿಶ್ವವಿದ್ಯಾಲಯಗಳ ಹಂತದಲ್ಲಿ ಹಣಕಾಸಿನ ವ್ಯವಹಾರಗಳಿಗೆ ಸಂಬಂಧಿಸಿದಂತೆ ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳುವ ಬಗ್ಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ ಇವರ ಪತ್ರ.**

ನಿರ್ಣಯ: ಉನ್ನತ ಶಿಕ್ಷಣ ಇಲಾಖೆಯ ಪತ್ರವನ್ನು ಸಭೆಯು ಪರಿಶೀಲಿಸಿ ಈ ಕೆಳಗಿನಂತೆ ತೀರ್ಮಾನಿಸಿತು.

೧. ದತ್ತಿ ನಿಧಿ ಖಾತೆಗಳು ಹಿಂದಿನಂತೆ ಹಾಗೆ ಮುಂದುವರೆಯುವುದು.
೨. ಇನ್ನುಮುಂದೆ ಹೊಸ ಖಾತೆಗಳಿಗೆ ಜಂಟಿ ಖಾತೆ ತೆರೆಯಲು ಕ್ರಮವಹಿಸುವುದು.

**೧೯೧.೧೬. ದೂರಶಿಕ್ಷಣ ನಿರ್ದೇಶನಾಲಯವು ಕಾರ್ಯಕಾರಿ ಸಮಿತಿಗೆ ಮಂಡಿಸಿರುವ ವಿಷಯಗಳ ಕುರಿತು.**

ನಿರ್ಣಯ: ದೂರಶಿಕ್ಷಣ ನಿರ್ದೇಶನಾಲಯವು ಕಾರ್ಯಕಾರಿ ಸಮಿತಿಗೆ ಮಂಡಿಸಿರುವ ವಿಷಯಗಳ ಕುರಿತು ಸಭೆಯು ಪರಿಶೀಲಿಸಿ ಈ ಕೆಳಗಿನಂತೆ ತೀರ್ಮಾನಿಸಿ ಅನುಮೋದನೆ ನೀಡಿತು.

೧. ಯುಜಿಸಿ ಆನ್‌ಲೈನ್ ಸಾಫ್ಟ್‌ವೇರ್ ಅಳವಡಿಸಿಕೊಳ್ಳುವುದು.
೨. ಹೊಸ ಕೋರ್ಸ್‌ಗಳಿಗೆ ಪ್ರವೇಶಕ್ಕೆ ಅನುಮೋದನೆ ನೀಡಿತು.
೩. ಹೊಸ ಕೋರ್ಸ್‌ಗಳ ಸಿದ್ಧಪಡಿಸಿದ ಪಠ್ಯಕ್ರಮಕ್ಕೆ ಅನುಮೋದನೆ ನೀಡಿತು.
೪. ೨೦೧೬-೨೦೧೭ನೇ ಸಾಲಿನ ಫಲಿತಾಂಶ ಪ್ರಕಟಣೆಗೆ ಅನುಮೋದನೆ ನೀಡಿತು.
೫. ಹೊಸ ಕೋರ್ಸ್‌ಗಳ ಕಲಿಕಾ ಸಾಮಗ್ರಿಗಳ ಪ್ರಕಟಣೆಗೆ ಅನುಮೋದನೆ ನೀಡಿತು.
೬. ಯುಜಿಸಿ ಮತ್ತು ಮುಕ್ತ ವಿಶ್ವವಿದ್ಯಾಲಯದ ನಿಯಮಾವಳಿಯಂತೆ ಪಠ್ಯ ಬರೆಯುವವರಿಗೆ ಸಂಭಾವನೆ ನೀಡುವುದು.
೭. ನಕಲಿ ಪದವಿಗಳಿಗೆ ಸಂಬಂಧಿಸಿ ಕ್ರಮವಹಿಸಲು ಸಭೆ ಸೂಚಿಸಿತು.

**೧೯೧.೧೭. ಶ್ರೀ ರಾಜಶೇಖರ ಸವಣೂರು, ಲೈಸೇನ್ ಅಧಿಕಾರಿ, ವೈದ್ಯಾಧಿಕಾರಿಗಳು ಮತ್ತು ದಾದಿಯರ ಸಂಭಾವನೆ ಹೆಚ್ಚಳ ಕೋರಿಕೆಗೆ ಸಲ್ಲಿಸಿರುವ ಮನವಿ ಕುರಿತು.**

ನಿರ್ಣಯ: ಶ್ರೀ ರಾಜಶೇಖರ ಸವಣೂರು, ಲೈಸೇನ್ ಅಧಿಕಾರಿ, ವೈದ್ಯಾಧಿಕಾರಿಗಳು ಮತ್ತು ದಾದಿಯರ ಸಂಭಾವನೆ ಹೆಚ್ಚಳ ಕೋರಿಕೆಗೆ ಸಲ್ಲಿಸಿರುವ ಮನವಿಗಳನ್ನು ಸಭೆಯು ಪರಿಶೀಲಿಸಿ ದೆಹಲಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ರಾಜಶೇಖರ ಸವಣೂರು ಅವರ ಸಂಭಾವನೆಯನ್ನು ರೂ.೧೨,೦೦೦/- ರಿಂದ ರೂ.೧೫,೦೦೦/-ಕ್ಕೆ ಹೆಚ್ಚಿಸಲು, ವೈದ್ಯಾಧಿಕಾರಿಗಳ ಮತ್ತು ದಾದಿಯರ ಸಂಭಾವನೆಯನ್ನು ಹೆಚ್ಚಿಸುವ ಬಗ್ಗೆ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

**೧೯೧.೧೮. ನ್ಯಾಕ್ ವರದಿಗೆ ಅವಶ್ಯವಿರುವ ಕನ್ನಡ ವಿಶ್ವವಿದ್ಯಾಲಯದ ಸಂಶೋಧನಾ ಸಂಬಂಧಿಸಿ ಪಾಲಸಿಗಳನ್ನು ನ್ಯಾಕ್ ವರದಿ ಸಮಿತಿಯು ಸಿದ್ಧಗೊಳಿಸಿ ಕಾರ್ಯಕಾರಿ ಸಮಿತಿ ಸಭೆಯ ಅನುಮೋದನೆಗಾಗಿ ಸಲ್ಲಿಸಿದೆ. ಇದಕ್ಕೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.**

ನಿರ್ಣಯ: ನ್ಯಾಕ್ ವರದಿಗೆ ಅವಶ್ಯವಿರುವ ಕನ್ನಡ ವಿಶ್ವವಿದ್ಯಾಲಯದ ಸಂಶೋಧನಾ ನೀತಿಗಳನ್ನು/ಪಾಲಸಿಗಳನ್ನು ನ್ಯಾಕ್ ಸಮಿತಿಯು ಸಿದ್ಧಗೊಳಿಸಿರುವುದನ್ನು ಸಭೆಯು ಪರಿಶೀಲಿಸಿ ಸಿದ್ಧಗೊಳಿಸಿದ ವರದಿಯನ್ನು ಕನ್ನಡ ಮತ್ತು ಇಂಗ್ಲೀಷ್‌ನಲ್ಲಿ ಸಿದ್ಧಪಡಿಸಲು ಸೂಚಿಸಿ ಅನುಮೋದನೆ ನೀಡಿತು.

**೧೯೧.೧೯. ಶ್ರೀ ಅಬ್ದುಲ್ ಹಕೀಂ ಮತ್ತು ಶ್ರೀ ಎಂ.ಸಿ. ಗುಡಿಮನಿ ಇವರ ಪ್ರಕರಣಗಳ ಕುರಿತು ಕಾನೂನು ಸಲಹೆಗಾರರು ನೀಡಿರುವ ಅಭಿಪ್ರಾಯವನ್ನು ಕಾರ್ಯಕಾರಿ ಸಮಿತಿ ಸಭೆಗೆ ಮಂಡಿಸಿದೆ.**

ನಿರ್ಣಯ: ಶ್ರೀ ಅಬ್ದುಲ್ ಹಕೀಂ ಮತ್ತು ಶ್ರೀ ಎಂ.ಸಿ. ಗುಡಿಮನಿ ಇವರ ಪ್ರಕರಣಗಳ ಕುರಿತು ಕಾನೂನು ಸಲಹೆಗಾರರು ನೀಡಿರುವ ಅಭಿಪ್ರಾಯವನ್ನು ಸಭೆಯು ಪರಿಶೀಲಿಸಿ ಈ ಕೆಳಗಿನಂತೆ ತೀರ್ಮಾನವನ್ನು ಕೈಗೊಂಡಿತು.

೧. ಕಾನೂನು ಹಲಹೆಗಾರರ ನಿರ್ಣಯದಂತೆ ನೋಟೀಸ್ ನೀಡುವುದು.

೨. ಎಂ.ಸಿ.ಗುಡಿಮನಿ ಅವರ ವಿಷಯ ಕುರಿತು ಒಬ್ಬ ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ತಜ್ಞರೊಬ್ಬರು ಒಳಗೊಂಡಂತೆ ವಿಚಾರಣಾ ಸಮಿತಿಯನ್ನು ರಚಿಸುವುದು.

೩. ಲೆಕ್ಕ ತಪಾಸಣೆ ಮೊತ್ತ ಕಡಿತಗೊಳಿಸುವ ಬಗ್ಗೆ ಎಂ.ಸಿ. ಗುಡಿಮನಿ ಅವರಿಗೆ ಪತ್ರ ನೀಡಿ ಅಭಿಪ್ರಾಯ ಪಡೆಯುವುದು.

೪. ಗುಡಿಮನಿ ಅವರ ಪ್ರಕರಣವು ನ್ಯಾಯಾಲಯದ ತೀರ್ಮಾನದ ಹಂತದಲ್ಲಿರುವುದರಿಂದ ಮುಂದಿನ ಕಾರ್ಯಕಾರಿ ಸಮಿತಿಯಲ್ಲಿ ಮಂಡಿಸಲು ಸಭೆ ಸೂಚಿಸಿತು.

**೧೯೧.೨೦. ಶ್ರೀ ಕಾರ್ಯಕಾರಿ ಸಮಿತಿ ಸಭೆಯ ೧೯೦.೧೧ರ ನಿರ್ಣಯದನ್ವಯ ಅಧ್ಯಯನಾಂಗದ ನಿರ್ದೇಶಕರು ಸಲ್ಲಿಸಿರುವ ಪಿಎಚ್.ಡಿ. ಅಧ್ಯಯನ ನಿಯಮಾವಳಿಯ ನೂತನ ಆಂಶಿಕ ಪರಿಷ್ಕರಣೆಯ ಭಾಗವನ್ನು ಕಾರ್ಯಕಾರಿ ಸಮಿತಿ ಸಭೆಯ ಅನುಮೋದನೆಗಾಗಿ ಮರು ಮಂಡಿಸಿದೆ.**

ನಿರ್ಣಯ: ಈ ವಿಷಯವನ್ನು ಸಭೆಯು ಪರಿಶೀಲಿಸಿ ಮಾನ್ಯ ಕುಲಪತಿಗಳು ನಿಯಮಾವಳಿಗಳನ್ನು ಅಂತಿಮಗೊಳಿಸಲು ಅಧಿಕಾರ ನೀಡಿತು.

**೧೯೧.೨೧. ಶ್ರೀ ೨೦೧೭-೧೮ನೇ ಸಾಲಿನಲ್ಲಿ ಅಧ್ಯಯನ ವಿಭಾಗಗಳ ಯೋಜನೆಗಳಿಗೆ ಹಾಗೂ ಸಂಶೋಧನೆಗಳಿಗೆ ಶೈಕ್ಷಣಿಕ ಸಂಪನ್ಮೂಲ ವ್ಯಕ್ತಿಗಳಾಗಿ ನಿಯೋಜಿಸಲು ಸಲ್ಲಿಸಲಾದ ೪೦ ವಿದ್ವಾಂಸರ ಪಟ್ಟಿಗೆ ಕಾರ್ಯಕಾರಿ ಸಮಿತಿ ಸಭೆಯ ಅನುಮೋದನೆ ಕೋರಿದೆ.**

ನಿರ್ಣಯ: ಈ ಕುರಿತಂತೆ ಸಭೆಯು ಪರಿಶೀಲಿಸಿ ಯು.ಜಿ.ಸಿ ನಿಯಮಾವಳಿಗೆ ಅನುಸಾರವಾಗಿ ಕ್ರಮವಹಿಸಲು ಸಭೆ ಸೂಚಿಸಿತು. ಬಳ್ಳಾರಿ ಇವರು ಆಯ್ಕೆಯಾಗಿರುವ ಬಗ್ಗೆ ಡಾ.ಮಂಜುನಾಥ ಬೇವಿನಕಟ್ಟಿಯವರು ತಮ್ಮ ವಿಭಾಗಕ್ಕೆ ಆಯ್ಕೆಯಾಗಿರುವ ಬಗ್ಗೆ ಮರುಪರಿಶೀಲಸಲು ಕೋರಿದರು.

**೧೯೧.೨೨. ೨೦೧೭-೧೮ನೇ ಸಾಲಿನ ಪಿಎಚ್.ಡಿ. ವಿದ್ಯಾರ್ಥಿಗಳ ಕೋರ್ಸ್‌ವರ್ಕ್‌ಗೆ ಸಂಬಂಧಿಸಿದಂತೆ ವಿವಿಧ ಅಧ್ಯಯನ ವಿಭಾಗಗಳ ಮುಖ್ಯಸ್ಥರ ಸಭೆಯ ನಡೆವಳಿಗೆ ಕಾರ್ಯಕಾರಿ ಸಮಿತಿ ಸಭೆಯ ಘಟನೋತ್ತರ ಅನುಮತಿ ಕೋರಿದೆ.**

ನಿರ್ಣಯ: ೨೦೧೭-೧೮ನೇ ಸಾಲಿನ ಪಿಎಚ್.ಡಿ. ವಿದ್ಯಾರ್ಥಿಗಳ ಕೋರ್ಸ್‌ವರ್ಕ್‌ಗೆ ಸಂಬಂಧಿಸಿದಂತೆ ವಿವಿಧ ಅಧ್ಯಯನ ವಿಭಾಗಗಳ ಮುಖ್ಯಸ್ಥರ ಸಭೆಯ ನಡೆವಳಿಗೆ ಕಾರ್ಯಕಾರಿ ಸಮಿತಿ ಸಭೆಯ ಘಟನೋತ್ತರ ಅನುಮೋದನೆ ನೀಡಿತು.

**೧೯೧.೨೩. ದಿನಾಂಕ ೧೨.೦೧.೨೦೧೮ರಂದು ನಡೆದ ಕಾಮಗಾರಿ/ಕಟ್ಟಡ ಸಲಹಾ ಸಮಿತಿ ಸಭೆಯ ನಡೆವಳಿಗೆ ಅನುಮೋದನೆ ಕೋರಿ.**

ನಿರ್ಣಯ: ಕಾಮಗಾರಿಗಳಿಗೆ ಸಂಬಂಧಿಸಿ ಕುಲಸಚಿವರ ಕಚೇರಿಯಿಂದ ತಾಂತ್ರಿಕ ವಿಭಾಗಕ್ಕೆ ಹೊರಡಿಸಿರುವ ಟಿಪ್ಪಣಿ/ ಸೂಚನಾ ಪತ್ರಗಳ ವಿವರಗಳನ್ನು ಕುಲಸಚಿವರು ಸಭೆಯ ಗಮನಕ್ಕೆ ತಂದರು. ಈ ವಿಚಾರಗಳನ್ನು ಗಮನದಲ್ಲಿರಿಸಿಕೊಂಡು ದಿನಾಂಕ. ೧೨.೦೧.೨೦೧೮ರಂದು ನಡೆದ ಕಟ್ಟಡ ಸಲಹಾ ಸಮಿತಿ ನಡೆವಳಿಗೆ ಈ ಕೆಳಗಿನ ಸೂಚನೆಗಳನ್ನು ಅನ್ವಯಿಸಿ ಸಭೆಯು ಅನುಮೋದನೆ ನೀಡಿತು.

ನುಡಿ ತರಗತಿ ಸಂಕೀರ್ಣ, ಚರಿತ್ರೆ ವಿಭಾಗ, ಗ್ರಂಥಾಲಯದ ಹೆಚ್ಚುವರಿ ಪಾವತಿ ಕೋರಿಕೆಗಳಿಗೆ ಸಂಬಂಧಿಸಿ ಸಂಬಂಧಿಸಿದ ಹೆಚ್ಚುವರಿ ಕೋರಿಕೆಯ ಕೆಲಸಗಳಿಗೆ ತಾಂತ್ರಿಕ ವಿಭಾಗವು ಆಡಳಿತ್ಮಾಕ ಅನುಮೋದನೆ ಪಡೆಯದಿರುವುದನ್ನು ಗಮನಿಸಿ ಹೆಚ್ಚುವರಿ ಕೆಲಸ ಮಾಡಿದ ಕೆಲಸದ ಸಮಗ್ರ ವಿವರಗಳನ್ನು ಮಂಡಿಸಿ ತಜ್ಞ ತಪಾಸಣೆಯಲ್ಲಿ ಒಪ್ಪಿಗೆಯಾದ ನಂತರ ಕ್ರಮವಹಿಸಲು ಸೂಚಿಸಿತು.

ಚಾಲ್ತಿಯಲ್ಲಿರುವ ಮತ್ತು ಇನ್ನು ಮುಂದೆ ನಿರ್ವಹಿಸುವ ಯಾವುದೇ ಕೆಲಸಗಳಿಗೆ ಅಂದಾಜಿಗಿಂತ ಹೆಚ್ಚಿನ ಪಾವತಿ ಕೋರಿಕೆಗಳಿದ್ದಲ್ಲಿ ಆಡಳಿತಾತ್ಮಕ ಪೂರ್ವಾನುಮತಿ ಪಡೆದಿರುವ ಕೆಲಸಗಳಿಗೆ ಮಾತ್ರ ಕ್ರಮವಹಿಸಲು ಸಭೆ ಒಪ್ಪಿಗೆ ನೀಡಿತು.

ತಾಂತ್ರಿಕ ವಿಭಾಗದ ಈ ಕ್ರಮ ಲೋಪಗಳ ಎಲ್ಲ ಬಾಧಕಗಳಿಗೆ ತಾಂತ್ರಿಕ ವಿಭಾಗವೇ ಹೊಣೆಯಾಗಿರುತ್ತದೆಂದು ಸಭೆ ಸೂಚಿಸಿತು.

ಯಾವುದೇ ಗುತ್ತಿಗೆದಾರರು ನಿರ್ವಹಿಸುವ ಕಾಮಗಾರಿ ವಿಳಂಬಗಳಿಗೆ ಸಂಬಂಧಿಸಿ ದಂಡ ವಿಧಿಸುವಾಗ ಚಾಲ್ತಿಯಲ್ಲಿರುವ ದಂಡವು ಅತ್ಯಂತ ಕಡಿಮೆ ಇದ್ದು, ಸೂಕ್ತವೆನಿಸುವ ದಂಡವನ್ನು ಸಕಾರಣಗಳಿದ್ದಲ್ಲಿ ಕಟ್ಟಡಾ ಸಲಹಾ ಸಮಿತಿಯೇ ನಿರ್ಣಯಿಸಲು ಸಭೆ ಸೂಚಿಸಿತು.

ಕರಾರಿನಂತೆ ಕಾರ್ಯನಿರ್ವಹಿಸದ ಕಾಮಗಾರಿ ಕೆಲಸಗಳನ್ನು ಕಾಲ ಕಾಲಕ್ಕೆ ಪರಿಶೀಲಿಸಿ ಆಡಳಿತಾಂಗಕ್ಕೆ ಸೂಕ್ತ ಕ್ರಮಗಳಿಗಾಗಿ ತಾಂತ್ರಿಕ ವಿಭಾಗವು ವರದಿಮಾಡಬೇಕು. ಹೀಗೆ ವರದಿ ಮಾಡದೆ ಸಂಭವಿಸುವ ನಷ್ಟಗಳಿಗೆ ತಾಂತ್ರಿಕ ವಿಭಾಗವೇ ಹೊಣೆಯಾಗಿರುತ್ತದೆ ಎಂದು ಸಭೆ ಸೂಚಿಸಿತು.

**೧೯೧.೨೪. ಮಾನ್ಯತಾ ಕೇಂದ್ರಗಳು ಮೂರು ಪಟ್ಟು ಶುಲ್ಕವನ್ನು ವಸೂಲಿ ಮಾಡುತ್ತಿರುವ ಕುರಿತು.**

ನಿರ್ಣಯ: ಈ ಕುರಿತು ಸಭೆಯು ಪರಿಶೀಲಿಸಿ ಕಾರ್ಯಕಾರಿ ಸಮಿತಿ ಸದಸ್ಯರನ್ನು ಒಳಗೊಂಡಂತೆ ಪರಿಶೀಲನಾ ಸಮಿತಿಯನ್ನು ರಚಿಸಿ ಕ್ರಮವಹಿಸಲು ಕುಲಪತಿಗಳಿಗೆ ಅಧಿಕಾರ ನೀಡಿತು.

**೧೯೧.೨೫. ಯು.ಜಿ.ಸಿ. ೬ನೇ ವೇತನ ಆಯೋಗದ ಬಾಕಿ ವೇತನ ಪಾವತಿಸುವ ಮನವಿ ಕುರಿತು.**

ನಿರ್ಣಯ: ಈ ಕುರಿತು ಸಭೆಯು ಪರಿಶೀಲಿಸಿ ಈ ಸಂಬಂಧ ಸರ್ಕಾರಕ್ಕೆ ಮತ್ತು ಸಂಬಂಧಿಸಿದ ಇಲಾಖೆಗೆ ಹಣಕಾಸು ಅಧಿಕಾರಿಗಳು ಪತ್ರ ಬರೆದು ಸೂಚನೆ ಬಂದನಂತರ ಕ್ರಮವಹಿಸಲು ಸಭೆ ಸೂಚಿಸಿತು.

**೧೯೧.೨೬. ಗಣ್ಯಮಾನ್ಯರಿಗೆ ನೀಡುತ್ತಿರುವ ಪ್ರಯಾಣ ಭತ್ಯೆ ಪಾವತಿಗೆ ಸಂಬಂಧಿಸಿ.**

ನಿರ್ಣಯ: ಗಣ್ಯಮಾನ್ಯರಿಗೆ ನೀಡುತ್ತಿರುವ ಪ್ರಯಾಣ ಭತ್ಯೆ ಪಾವತಿ ಕಿ.ಮೀ. ಒಂದಕ್ಕೆ ರೂ.೧೩/-ಗಳನ್ನು ನಿಗದಿಗೊಳಿಸಲು ಸಭೆ ಸೂಚಿಸಿತು.

**೧೯೧.೨೭. ಲ್ಯಾಬ್‌ಲ್ಯಾಂಡ್ ಸಂಸ್ಥೆ ಮೈಸೂರು ಇವರು ವಿಶ್ವವಿದ್ಯಾಲಯದೊಂದಿಗೆ ನಿರ್ವಹಿಸಲು ಇಚ್ಛಿಸಿರುವ ಯೋಜನೆಗಳ ಪ್ರಸ್ತಾವನೆ ಬಗ್ಗೆ.**

ನಿರ್ಣಯ: ಪ್ರಸ್ತಾವನೆಯನ್ನು ಪರಿಶೀಲಿಸಿದ ಸಭೆಯು "ವಿಶ್ವವಿದ್ಯಾಲಯದ ಆಶಯಕ್ಕೆ ಧಕ್ಕೆಯಾಗದಂತೆ, ವಿಶ್ವವಿದ್ಯಾಲಯದ ಆರ್ಥಿಕ ಸದೃಢತೆಗಾಗಿ, ಸಂಪನ್ಮೂಲಕ್ಕಾಗಿ ಖಾಸಗಿ ಸಹಭಾಗಿತ್ವದೊಂದಿಗೆ ಹಸಿರು ಪ್ರವಾಸೋದ್ಯಮ: ಕೃಷಿ, ನೀರು, ಆಹಾರ, ಆರೋಗ್ಯ, ಕಲೆ, ಸಾಹಿತ್ಯ ಮತ್ತು ಸಂಸ್ಕೃತಿ ವಿಷಯಗಳಲ್ಲಿ ಅನುಭವಿ ತಜ್ಞರೊಂದಿಗೆ ಪ್ರವಾಸೋದ್ಯಮಕ್ಕೆ ಸಮ್ಮಂದಿಸಿ ಎಂ.ಎ,ಪಿಎಚ್.ಡಿ ಪದವಿ ಮತ್ತು ಇಂಗ್ಲೀಷ್, ಹಿಂದಿ, ಫ್ರೆಂಚ್ ಭಾಷೆಗಳನ್ನು ಕಲಿಸುವ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಕನ್ನಡ ವಿಶ್ವವಿದ್ಯಾಲಯವು ಪ್ರಾರಂಭಿಸುವುದು. ಇದಕ್ಕೆ ಪೂರಕವಾಗಿ ಖಾಸಗಿ ಸಂಸ್ಥೆಯಾದ ಲ್ಯಾಬ್‌ಲ್ಯಾಂಡ್ ಬಯೋಟೆಕ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯ ಸಹಯೋಗದೊಂದಿಗೆ ಆವರಣದಲ್ಲಿ ಕನ್ನಡ ನಾಡಿನ ಕಲೆಗಳ ಸಮುಚ್ಚಯಗಳನ್ನು ನಿರ್ಮಿಸುವ ಯೋಜನೆಗಳನ್ನು ಕೈಗೊಳ್ಳಲು ಸರ್ಕಾರಕ್ಕೆ ಪತ್ರ ಬರೆದು ಸಂಪುಟ ಸಮಿತಿಯ ಅನುಮತಿ ಪಡೆಯಲು" ಸಭೆಯು ಅನುಮತಿ ನೀಡಿತು.

ಕುಲಸಚಿವರ ವಂದನೆಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು
ಪದನಿಮಿತ್ತ ಕಾರ್ಯದರ್ಶಿ

ಕುಲಪತಿಗಳು
ಅಧ್ಯಕ್ಷರು